ಒ ಎಸ್ 268/2022 ಪಿ.ಡಬ್ಲ್ಯೂ: 1

ಇಂದು ದಿಃ 12.11.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಟಿ ಎಂ ಜಿ ವಕೀಲರಿಂದಃ

ನಾನು ದಾವೆಯ ಜೊತೆ ಹಾಜರುಪಡಿಸಿರುವ ವಂಶವೃಕ್ಷವು ವಾಸ್ತವಾಂಶಕ್ಕೆ ಸರಿಯಾಗಿಲ್ಲ ಎಂದರೆ ಸುಳ್ಳು. ನಿಂಗಪ್ಪ ಗಂಗಮ್ಮನಿಗೆ ತಂದೆ, ನಿಂಗಪ್ಪನಿಗೆ ಇಬ್ಬರು ಮಕ್ಕಳು. ನಿಂಗಪ್ಪನ ತಂದೆ ತಾಯಿ ಹೆಸರು ನನಗೆ ಗೊತ್ತಿಲ್ಲ. ನಿಂಗಪ್ಪನ ತಂದೆ ತಾಯಿ ಯಾವಾಗ ಮೃತರಾದರು ಎಂದು ಗೊತ್ತಿಲ್ಲ. ನಿಂಗಪ್ಪನ ಜೊತೆ 5 ಜನ ಹುಟ್ಟಿರುತ್ತಾರೆ. ಅವರೆಲ್ಲರ ಹೆಸರನ್ನು ದಾವೆಯಲ್ಲಿ ನಮೂದು ಮಾಡಿಲ್ಲ. ಅವರ ಹೆಸರುಗಳೆಂದರೆ ಪುಟ್ಟಮಾದಪ್ಪ, ಕುಂಟಮಲ್ಲಪ್ಪ, ಮಾದಪ್ಪ, ನಿಂಗಪ್ಪ ಮತ್ತು ಮರಿದೇವು. ಗಂಗಮ್ಮನ ತಂದೆ ನಿಂಗಪ್ಪನಿಗೆ ಒಟ್ಟು ಎಷ್ಟು ವಿಸ್ತೀರ್ಣದ ಆಸ್ತಿ ಇವೆ ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ನಿಂಗಪ್ಪನಿಗೆ ಮನೆ ಮತ್ತು ಜಮೀನು ಇದ್ದವು. ಆ ಆಸ್ತಿಗಳನ್ನು ನಿಂಗಪ್ಪ ಇದ್ದಾಗಲೇ ಮಾರಾಟ ಮಾಡಿಕೊಂಡಿದ್ದರು. ಆಸ್ತಿಗಳು ಮತ್ತು ಜಮೀನುಗಳು ದಾಸನೂರು ಗ್ರಾಮದಲ್ಲಿ ಇದ್ದವು. ಆ ಸ್ವತ್ತುಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇರಲಿಲ್ಲ.

ನಿಂಗಪ್ಪನ ಹೆಂಡತಿ ಮಲ್ಲಮ್ಮನನ್ನು ನಾನು ನೋಡಿರುತ್ತೇನೆ. ಅವರು ಮೃತಪಟ್ಟು ಇವತ್ತಿಗೆ 120 ವರ್ಷ ಆಗಿರಬಹುದು. ಮಹದೇವಪ್ಪ ಮತ್ತು ಗಂಗಮ್ಮ ನಿಂಗಪ್ಪ ಮತ್ತು ಮಲ್ಲಮ್ಮನ ಮಕ್ಕಳು ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಸರ್ಕಾರಿ ದಾಖಲೆಗಳೆಲ್ಲವೂ ಇವೆ. ಆ ದಾಖಲೆಗಳನ್ನು ಹಾಜರು ಮಾಡಲು ತೊಂದರೆ ಇಲ್ಲ. ಆ ರೀತಿ ಯಾವುದೇ ದಾಖಲೆಗಳು ಇಲ್ಲದಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಂಗಮ್ಮನವರು ಆರೋಗ್ಯವಾಗಿದ್ದರೂ ಸಹ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಂಗಮ್ಮನಿಗೆ ಆರೋಗ್ಯ ಸರಿಯಿಲ್ಲ ಎಂಬ ಬಗ್ಗೆ ಪೂರಕ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ವಿಸ್ತೀರ್ಣ ಮತ್ತು ವಿವರಗಳು ಗೊತ್ತಿಲ್ಲ ಎಂದರೆ ಸುಳ್ಳು. ಗಂಗಮ್ಮನವರು ನನಗೆ ದಾವೆ ಬಗ್ಗೆ ಏನನ್ನೂ ವಿವರಣೆ ಕೊಟ್ಟಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ನಾವೇ ಜಮೀನು ಮಾಡುತ್ತಿದ್ದೇವೆ. ದಾವಾ ಆಸ್ತಿ ನಮ್ಮ ಸ್ವಾಧೀನದಲ್ಲಿದೆ ಮತ್ತು ನಾವೇ ಜಮೀನು ಮಾಡುತ್ತಿದ್ದೇವೆ ಎಂಬ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಯನ್ನು ಹಾಜರುಪಡಿಸಿಲ್ಲ ಮತ್ತು ನೋಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಮರಿದೇವುರವರ ಹೆಸರಿನಲ್ಲಿದೆ. ಕಂದಾಯವನ್ನು ಈವರೆಗೂ ಯಾರೂ ಪಾವತಿ ಮಾಡಿಲ್ಲ. ದಾವಾ ಆಸ್ತಿಯನ್ನು ವಾದಿ ಮತ್ತು 1ನೇ ಪ್ರತಿವಾದಿಗೆ ಯಾವಾಗ ಬಿಟ್ಟುಕೊಟ್ಟರು ಎಂದು ನನಗೆ ಗೊತ್ತಿಲ್ಲ ಆದರೆ ದೊರೆಸ್ವಾಮಿರವರು ಬಿಟ್ಟುಕೊಟ್ಟಿಲ್ಲ, ಮಹದೇವಪ್ಪ

ಮತ್ತು ಗಂಗಮ್ಮ ರವರಿಗೆ ನಿಂಗಪ್ಪ ರವರಿಗೆ 70 ವರ್ಷಗಳ ಹಿಂದೆ ಬಿಟ್ಟುಕೊಟ್ಟಿದ್ದಾರೆ ಎನ್ನುತ್ತಾರೆ. ಆ ಸಮಯದಲ್ಲಿ ನಾನು ಹುಟ್ಟಿರಲಿಲ್ಲ. ವಿಚಾರ ತಿಳಿಯದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಯನ್ನು ಬಿಟ್ಟುಕೊಟ್ಟಿದ್ದರು ಎಂಬ ಬಗ್ಗೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸುಳ್ಳು. ಗಂಗಮ್ಮ ಮತ್ತು ಮಹದೇವಪ್ಪರವರ ಹೆಸರಿನಲ್ಲಿ ಆರ್ ಟಿ ಸಿ ಗಳು ಇರಲಿಲ್ಲ. ದಾವಾ ಆಸ್ತಿಗಳು ಮರಿದೇವುರವರ ತಂದೆಯವರದ್ದು. ಜಂಟಿಯಲ್ಲಿ ಸ್ವಾಧೀನ ಇದ್ದಾರೆ ಎನ್ನುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಜಂಟಿಯಾಗಿ ಕಂದಾಯ ಪಾವತಿ ಮಾಡಿದ ಬಗ್ಗೆ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಹೆಸರು ಮಾದಪ್ಪ. ಗಂಗಮ್ಮನ ತಾತನ ಹೆಸರು ಸಹ ಮಾದಪ್ಪ ಎಂದರೆ ಸರಿ. ದಾವಾ ಆಸ್ತಿ ಗಂಗಮ್ಮನ ತಾತ ಮಾದಪ್ಪನಿಗೆ ಸೇರಿದ ಸ್ವತ್ತಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂಧಿ ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.